# ವಿದ್ಯಾಕಾಶಿ ಕರಿಯರ್ ಅಕಾಡೆಮಿ

**ಸಮಯ : 90 ನಿಮಿಷಗಳು** | **ಪಿಎಸ್‌ಐ ಪತ್ರಿಕೆ – 1** | **ಪ್ರಶ್ನೆಗಳು**

ನೊಂದಣಿ ಸಂಖ್ಯೆ :

**ಪ್ರಬಂಧ, ಭಾಷಾಂತರ & ಸಾರಾಂಶ ಬರವಣಿಗೆ,**

**ಅಂಕಗಳು : 100**

ಹೆಸರು :

ಮೊಬೈಲ್ ನಂ :

## ಭಾಗ – I

**ಈ ಕೆಳಕಂಡ ಯಾವುದಾದರೂ ಒಂದು ವಿಷಯಕ್ಕೆ 600 ಪದಗಳು ಮೀರದಂತೆ ಪ್ರಬಂಧವನ್ನು ಬರೆಯಿರಿ.**

1. ಪ್ರಜಾಪ್ರಭುತ್ವ ಬಲಗೊಳಿಸುವಲ್ಲಿ 'ಪಂಚಾಯತ್ ರಾಜ್ ವ್ಯವಸ್ಥೆ' ವಹಿಸಿದ ಪಾತ್ರವನ್ನು ಕುರಿತು ಚರ್ಚಿಸಿರಿ.

**ಅಥವಾ**

2. 'ಏಕರೂಪ ನಾಗರೀಕ ಸಂಹಿತೆ' ಕುರಿತು ಚರ್ಚಿಸಿರಿ.

**ಅಥವಾ**

3. ಕನ್ನಡ ಶಾಲೆಗಳ ಸ್ಥಿತಿಗತಿ ಹಾಗೂ ಅವುಗಳ ಪುನಶ್ಚೇತನವನ್ನು ಕುರಿತು ಚರ್ಚಿಸಿರಿ

**ಅಥವಾ**

4. ಭಾರತದ ಐಕ್ಯತೆಗೆ ಇರುವ ಸವಾಲುಗಳು ಹಾಗೂ ಅವುಗಳ ಪರಿಣಾಮಗಳನ್ನು ಕುರಿತು ಚರ್ಚಿಸಿರಿ.

**ಅಥವಾ**

5. 'ಕೈಗಾರಿಕರಣ ಇಲ್ಲವೆ ವಿನಾಶ' ಹೇಳಿಕೆಯನ್ನು ವಸ್ತುನಿಷ್ಠವಾಗಿ ಸಮರ್ಥಿಸಿರಿ.

# ಭಾಗ – II

**II.** ಈ ಕೆಳಕಂಡ ಸಾರಾಂಶವನ್ನು ಕನ್ನಡದಿಂದ ಇಂಗ್ಲೀಷಗೆ ಭಾಷಾಂತರಿಸಿ.

**Translate the following paragraph from Kannada to English.**

ಕರ್ನಾಟಕವು ವರ್ಷವೆಲ್ಲಾ ವಿದ್ಯುತ್ತಿನ ಕೊರತೆಯನ್ನು ಹೊಂದಿರುವುದು. ಆದರೆ ಕೊರತೆಯ ಪ್ರಮಾಣ ಏರುಪೇರಿನಿಂದ ಕೂಡಿದ್ದು ಬೇಸಿಗೆಯಲ್ಲಿ ಕೊರತೆಯು ಅತ್ಯಂತ ಗರಿಷ್ಠ ಪ್ರಮಾಣಕ್ಕೆ ತಲುಪುವುದು. ಇದಕ್ಕೆ ಕಾರಣ ಬೇಸಿಗೆಯಲ್ಲಿ ಸಾಕಷ್ಟು ನೀರಿನ ಪೂರೈಕೆಯಿರದೆ ಜಲ ವಿದ್ಯುತ್ ಉತ್ಪಾದನೆ ಕಡಿಮೆಯಾಗುವುದಲ್ಲದೆ. ವಿದ್ಯುತ್ತಿನ ಬಳಕೆಯೂ ಗರಿಷ್ಠವಾಗಿರುವುದು. ರಾಜ್ಯದಲ್ಲಿ ಜಲವಿದ್ಯುತ್ತನ್ನು ಉತ್ಪಾದಿಸಲು ನೀರು ಪೂರೈಕೆಯ ಜಲಾಶಯಗಳಲ್ಲಿ ನೀರಿನ ಮಟ್ಟ ಚಳಿಗಾಲದ ನಂತರ ಕಡಿಮೆಯಾಗುತ್ತಾ ಬಂದು ಕೊನೆಗೆ ಬೇಸಿಗೆಯಲ್ಲಿ ಕನಿಷ್ಠ ಮಟ್ಟದಲ್ಲಿರುವುದು. ಜೊತೆಗೆ ರಾಜ್ಯವು ಕಲ್ಲಿದ್ದಲಿನ ಉತ್ಪಾದನೆಯನ್ನು ಹೊಂದಿಲ್ಲದಿದ್ದು ಅಗತ್ಯವಿರುವ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳುತ್ತಿದೆ. ಇದರಿಂದಾಗಿ ಕಲ್ಲಿದ್ದಲಿನ ಪೂರೈಕೆಯೂ ಸಹ ಅಸಮರ್ಪಕವಾಗಿರುವುದು. 'ತಣ್ಣೀರು ಬಾವಿ' ಯ ಬಳಿ ಅರಬ್ಬಿ ಸಮುದ್ರದ ತೀರದಲ್ಲಿ ನೆಲೆಸಿದ್ದ ಬಾರ್ಜ (ಸಣ್ಣ ಹಡಗು) ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶಾಖ ವಿದ್ಯುತ್ ಘಟಕವು 7 ವರ್ಷದ ಒಪ್ಪಂದ ಮುಗಿದುದರಿಂದ ತನ್ನ ಕಾರ್ಯವನ್ನು ನಿಲ್ಲಿಸಿತು.

ರಾಜ್ಯದಲ್ಲಿ ವಿದ್ಯುತ್ತಿನ ಬಳಕೆ ನಿರಂತರವಾಗಿ ಹೆಚ್ಚಿದೆ. ಎಲ್ಲಾ ಕ್ಷೇತ್ರಗಳಲ್ಲಿಯೂ ವಿದ್ಯುತ್ತಿನ ಬಳಕೆ ಅಧಿಕಗೊಂಡಿದೆ. ಇದರಿಂದಾಗಿ ವಿದ್ಯುತ್ತಿನ ಕೊರತೆ ಗರಿಷ್ಠ ಹಂತದಲ್ಲಿ (Peak period) 15–25 ರಷ್ಟು ಹೆಚ್ಚಾಗಿರುವುದು. ರಾಜ್ಯವು ವಿದ್ಯುತ್ತಿನ ಕೊರತೆಯನ್ನು ಪರಿಹರಿಸಲು ಇನ್ನಿಲ್ಲದ ಹರಸಾಹಸವನ್ನು ಮಾಡುತ್ತಿದೆ. ಇದಕ್ಕಾಗಿ ಶಾಖ ವಿದ್ಯುತ್ ಹಾಗೂ ಜಲವಿದ್ಯುತ್ ಯೋಜನೆಗಳನ್ನು ಕಾರ್ಯಗತಗೊಳಿಸಲು ಪ್ರಯತ್ನಿಸುತ್ತಿದೆ.

ವಿದ್ಯಾಕಾಶಿ ಕರಿಯರ್ ಅಕಾಡೆಮಿ

# ಭಾಗ – III

**III. ಈ ಕೆಳಕಂಡ ಸಾರಾಂಶವನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರಿಸಿ.**

**Translate the following paragraph from English to Kannada.**

**Demonetisation was a new initiative taken by the Government of India in November-2016 to tackle the problem of corruption, black money, terrorism and circulation of fake currency in the economy. Old currency notes of Rs.500 and Rs.1000 were no longer legal tender. New currency notes in the demonetization of Rs.500 and Rs.1000 were launched. The public were advised to deposit old currency notes in their bank account till 31 December 2016 without any declaration and upto 31 March 2017 with the RBI with declaration.**

**Further to avoid an complete breakdown and cash crunch, notes government had allowed exchange of Rs.4000 old currency by new currency per person and per day. Further till 12 December 2016, old currency notes were acceptable as legal tender at petrol pumps, government hospitals and for payment of government dues, like taxes, power bills etc.**

**This move received both appreciation and criticism. There were long queues outside banks and ATM booths. The shortage of currency in circulation had an adverse impact on the economic activities. However, things improved with time and normalcy returned.**

ವಿದ್ಯಾಕಾಶಿ ಕರಿಯರ್ ಅಕಾಡೆಮಿ

# ಭಾಗ – IV

**II.** ಈ ಕೆಳಕಂಡ ವಿಷಯವನ್ನು ಸಂಕ್ಷೇಪಿಸಿ. 1/3 ಕ್ಕಿಂತ ಮೀರದಂತೆ ಬರೆಯಿರಿ.

ಪ್ರಸ್ತುತ ಆಡಳಿತ ವ್ಯವಸ್ಥೆಯಲ್ಲಿರುವ ಲೋಪ ದೋಷಗಳನ್ನು ನಿವಾರಿಸಲು ಕೈಗೊಳ್ಳುವ ಕ್ರಮಗಳಿಗೆ ಆಡಳಿತ ಸುಧಾರಣೆಗಳು ಎಂದು ಹೇಳಬಹುದು. ಆಡಳಿತ ವ್ಯವಸ್ಥೆಯ ನ್ಯೂನತೆಗಳ ನಿವಾರಣೆಗಾಗಿ ಆಡಳಿತ ಯಂತ್ರದ ಪುನರ್‌ರಚನೆ. ಅಂದರೆ ಇಂದಿನ ಅವಶ್ಯಕತೆಗಳಿಗೆ ಮತ್ತು ಪರಿಸ್ಥಿತಿಗಳಿಗನುಗುಣವಾಗಿ ಆಡಳಿತ ವ್ಯವಸ್ಥೆಯಲ್ಲಿ ಬದಲಾವಣೆ ಅಥವಾ ಮಾರ್ಪಾಡುಗಳನ್ನು ಮಾಡಲು ಮತ್ತು ಸೈದ್ಧಾಂತಿಕ ಹಾಗೂ ಆರ್ಥಿಕ–ಸಾಮಾಜಿಕ ವಾತಾವರಣಕ್ಕನುಗುಣವಾಗಿ ಆಡಳಿತ ನೀತಿ, ವಿಧಿ ವಿಧಾನಗಳಲ್ಲಿ ಬದಲಾವಣೆ ಮಾಡಲು ಆಡಳಿತಾತ್ಮಕ ಸುಧಾರಣೆಗಳು ಅತ್ಯಗತ್ಯ.

ಕೆಲವೊಮ್ಮೆ ‘ಸುಧಾರಣೆ’ ಎಂಬ ಪದವನ್ನು ಆಡಳಿತಾತ್ಮಕ ‘ಬದಲಾವಣೆ’, ‘ಪುನರ್‌ವ್ಯವಸ್ಥೆ’ ಎಂಬ ಪದಗಳಿಗೆ ಸಮಾನಾಂತರವಾಗಿ ಬಳಸಲಾಗುತ್ತದೆ. ಪಾರಿಭಾಷಿಕವಾಗಿ ಸುಧಾರಣೆ ಎಂದರೆ ಹೊಸ ರೂಪ, ಆಕಾರ ಕೊಡುವುದು ಎಂದು ಅರ್ಥ ಮತ್ತು ಅದು ಉತ್ತಮ ಜೀವನ ಶೈಲಿಯನ್ನು ಸೂಚಿಸುತ್ತದೆ. ಆಡಳಿತಾತ್ಮಕ ಸುಧಾರಣೆ ಎಂಬುದು ಆಡಳಿತ ರಚನೆ, ಕಾರ್ಯವಿಧಾನ ಹಾಗೂ ವರ್ತನೆಯಲ್ಲಿ ಸಂಪೂರ್ಣ ಪರಿವರ್ತನೆಯನ್ನುಂಟು ಮಾಡುವ ಪ್ರಕ್ರಿಯೆಯನ್ನು ಸೂಚಿಸುತ್ತದೆ.

ರಾಷ್ಟ್ರೀಯ ಗುರಿಗಳ (ಧ್ಯೇಯಗಳ) ಸಾಧನೆಗಾಗಿ ಸಾರ್ವಜನಿಕ ಆಡಳಿತದ ನಿರ್ವಹಣಾ ಮತ್ತು ಆಡಳಿತಾತ್ಮಕ ಸಾಮರ್ಥ್ಯವನ್ನು ಹೆಚ್ಚಿಸಲು ಹಾಗೂ ವಿಸ್ತರಿಸಲು ಕೈಗೊಳ್ಳುವ ಕ್ರಮಗಳು ಆಡಳಿತಾತ್ಮಕ ಸುಧಾರಣೆಗಳೆಂದು ಅರ್ಥೈಸಲಾಗಿದೆ.

ವಿದ್ಯಾಕಾಶಿ ಕರಿಯರ್ ಅಕಾಡೆಮಿ